**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 2556/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.01**
**ದಿನಾಂಕಃ** 03.07.2025 **ಸಿಡಬ್ಲ್ಯೂ.01**
**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಎಸ್ ವಕೀಲರಿಂದಃ**

ಚಾಸಾ.1 ಮತ್ತು 3 ರಿಂದ 5 ರವರು ಒಂದೇ ಊರಿನವರು. ನಾನು ಅಪಘಾತವನ್ನು ನೋಡಿಲ್ಲ ಎಂದರೆ ಸರಿ. ಪಂಚನಾಮೆ ಜರುಗಿಸಲು ನನ್ನನ್ನು ಹನುಮಂತಪ್ಪ ಎಂಬ ಪೊಲೀಸ್ ಪೇದೆ ಕರೆದಿದ್ದರು. ದಿಃ 20.12.2021 ರಂದು ನನಗೆ ಪೊಲೀಸರು ನೋಟಿಸ್ ನೀಡಿದ್ದರು. ಘಟನಾ ಸ್ಥಳದಲ್ಲಿ ಸಾಕಷ್ಟು ಹೋಟೆಲಗಳು ಹಾಗೂ ಅಂಗಡಿ ಮುಗ್ಗಟ್ಟುಗಳು ಇದ್ದವು ಎಂದರೆ ಸರಿ. ಘಟನಾ ಸ್ಥಳದಲ್ಲಿ ಪಂಚನಾಮೆ ಕಾಲಕ್ಕೆ ಸುಮಾರು 5-6 ಜನ ಇದ್ದರು. ನಿಪಿ.1 ಮತ್ತು 4 ನ್ನು ಹನುಮಂತಪ್ಪ ಎಂಬ ಪೊಲೀಸ್ ಪೇದೆ ಬರೆದಿರುತ್ತಾರೆ. ಸದರಿ ಪಂಚನಾಮೆಗಳನ್ನು ತಯಾರಿಸಲು ತಲಾ ಮುಕ್ಕಾಲು ಗಂಟೆ ಆಗಿರುತ್ತದೆ. ನಿಪಿ.1 ಕ್ಕೆ ಮೊದಲ ಬಾರಿಗೆ ನಾನೇ ಸಹಿ ಮಾಡಿರುತ್ತೇನೆ. ನಿಪಿ.1 ರಲ್ಲಿ ನಮೂದಿಸಿರುವ ಎಲ್ಲಾ ಸಂಗತಿಗಳನ್ನು ಹೇಳಲು ಬರುವುದಿಲ್ಲ ಸಾಕ್ಷಿಯು ಮುಂದುವರೆದು ಕೆಲವು ಸಂಗತಿಗಳನ್ನು ಹೇಳಬಹುದು ಎಂದು ನುಡಿಯುತ್ತಾರೆ. ನಿಪಿ.1 ನ್ನು ಜರುಗಿಸುವ ಕಾಲಕ್ಕೆ ವಾಹನಗಳು ಸ್ಥಳದಲ್ಲಿ ಇರಲಿಲ್ಲ. ಸಾಕ್ಷಿಯು ಮುಂದುವರೆದು ಠಾಣೆಯಲ್ಲಿ ಇತ್ತು ಎಂದು ನುಡಿಯುತ್ತಾರೆ. ನಿಪಿ.1 ಮತ್ತು 4 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಘಟನಾ ಸ್ಥಳದಲ್ಲಿ ಒಂದು ಬಾರಿ ಮತ್ತು ಠಾಣೆಯಲ್ಲಿ ಒಂದು ಬಾರಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಮೃತ ರಾಜಪ್ಪನವರ ಪರಿಚಯವಿದೆ. ಸದರಿಯವರ ವಾರಸುದಾರರ ಪರಿಹಾರ ಧನ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಅರ್ಜಿಯ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಸ್ಥಳದಲ್ಲಿ ನಿಪಿ.3 ರಂತೆ ಛಾಯ ಚಿತ್ರ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ.3,5 ಮತ್ತು 6 ನ್ನು ಮೃತರ ಕುಟುಂಬಕ್ಕೆ ಅನುಕೂಲವಾಗಲಿ ಎಂದು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಮೃತ ರಾಜಪ್ಪನವರ ತಪ್ಪು ಇದ್ದರೂ ಸಹ ಅವರ ಕುಟುಂಬಕ್ಕೆ ಪರಿಹಾರ ಧನ ಸಿಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ